ಒಂದು ಮುಷ್ಠಿ ಹೆಚ್ಚಿನ ಗೌರವ. ಹೆಚ್ಚಿನ ಬೇಡಿಕೆ. ಹೆಚ್ಚಿನ ಕೂಲಿ. ಮನೆಯಲ್ಲಿ ಕಾಫಿ, ತಿಂಡಿ ಮಾಡಿಸಿ ತೋಟಕ್ಕೆ ತೆಗೆದುಕೊಂಡು ಹೋಗಿ ಕೊಡಬೇಕಾದ ಹೆಚ್ಚುವರಿ ಕೆಲಸವನ್ನು ಯಾವತ್ತೂ ವೈಸಿಕೊಂಡು ಮಾಡುತ್ತಿದ್ದವನು ವೆಂಕಟರಾಮು. ಔಷಧಿ ಹೊಡೆಯುವವನು ಕೆಲಸ ಕೈದು ಮಾಡಿ ಮನೆಗೆ ಬಂದ ಮೇಲೆ ಅವನಿಗೆ ಮೈಗೆ ಹಚ್ಚಿಕೊಳ್ಳಲು ಎಣ್ಣೆ. ಸ್ನಾನಕ್ಕೆ ಕಟ್ಟಿಗೆ ಕಾದ ಬಿಸಿ ನೀರು. ಮೈ ತೊಳೆದುಕೊಳ್ಳಲು ಸೋಪಿನ ತುಂಡು.

ಮಜ್ಜನದ ನಂತರ ಮುಂಚೇಕಡೆ ಜಗುಲಿಯಲ್ಲಿ ಊಟ. ಭರ್ತಿ ಬೆಳ್ಳುಳ್ಳಿ ಬೇಳೆ ಒಗ್ಗರಿಸಿದ ಹುರುಳಿಸಾರಿಗೂ, ಮಳೆಗಾಲಕ್ಕೂ, ಭರ್ಜರಿ ನಂಟು. ಗದ್ದೆ ಹೂಡುವ ಎತ್ತುಗಳಿಗೆ ದೊಡ್ಡ ದೊಡ್ಡ ಕಡಾಯಿಗಳಲ್ಲಿ ಹುರುಳಿ ಬೇಯಿಸಿ ತಿನ್ನಲು ಕೊಡುವಾಗ ಮೇಲೆ ಉಳಿಯುವ ಮಂದಗಿನ ಹುರುಳಿಕಟ್ಟಿಗೆ ಭಾರೀ ಬೇಡಿಕೆ. ಕೆಲಸದ ಆಳುಗಳು ಬಾಯಿಗೆ ಚಳ್ಳೆಹುರಿ ಬಿಗಿದ ಉಗ್ಗ ತಂದು ಕಟ್ಟು ತೆಗೆದುಕೊಂಡು ಹೋಗುತ್ತಿದ್ದರು. ಮುರುವಿನ ಕೊಟ್ಟಿಗೆಯ ಒಲೆಯ ಮೇಲೆ ಸೇರುಗಟ್ಟಲೆ ಹುರುಳಿ ಬೇಯುತ್ತಿದ್ದರೆ ಅಷ್ಟು ರಾಷ್ಟ್ರಕ್ಕೆ ಹರಡಿಕೊಳ್ಳುತ್ತಿತ್ತು ಪರಿಮಳ. ಔಷಧಿ ಹೊಡೆದು ಬಂದವನಿಗೆ, ಸಹಾಯಕ್ಕೆ ಹೋದವನಿಗೆ ಊಟ ಬಡಿಸುತ್ತಿದ್ದುದು ವೆಂಕಟರಾಮು. ಶಿವರಾಮನ ಕೆಲಸ ಏನಿದ್ದರೂ ಮೇಲ್ವಿಚಾರಣೆ. ಯಜಮಾನಿಕೆ. ಸಸಿನೆಟ್ಟಿ, ಗದ್ದೆಕೊಯ್ಲಿನ ಕಾಲದಲ್ಲಿ ಮನೆ ಹೆಂಗಸರಿಗೆ ತುರಿಸಿಕೊಳ್ಳಲೂ ಪುರುಸೊತ್ತಿಲ್ಲದಷ್ಟು ಕೆಲಸ ಕೆಲಸ. ಹತ್ತೆಂಟು ಆಳುಗಳಿಗೆ ತಿಂಡಿ, ಕಾಫಿ ಸರಬರಾಜು ಮಾಡುವುದರಲ್ಲಿ ಬೆನ್ನುಕೋಲು ನಿಟಿನಿಟಿ ಎನ್ನುತ್ತಿರುತ್ತಿತ್ತು. ಭೂಮಿಹುಣ್ಣಿಮೆಯ ಸುಮುಹೂರ್ತದಲ್ಲಿ ಕೊನೆಮುಹೂರ್ತ ಮಾಡಿದ ಮೇಲೆ ಹಳ್ಳಿಮನೆಯ ಕೆಲಸ ಮತ್ತೊಂದು ಮಗ್ಗುಲಿಗೆ ಹೊರಳಿಕೊಳ್ಳುತ್ತಿತ್ತು. ನಡುರಾತ್ರಿಯವರೆಗೆ ಕೂತು ಅಡಿಕೆ ಸುಲಿಯುವ ಆಳುಗಳಿಗೆ ರಾತ್ರಿ ಕಾಫಿ ಅಥವಾ ಚಾ. ಜೊತೆಗೆ ಅವಲಕ್ಕಿ ಉಪ್ಪರಿಯ ಸಮಾರಾಧನೆ. ಹಂಡೆ ತುಂಬಿ ಅಡಿಕೆ ಸುಲಿತ ಮುಗಿಸಿದ ಮೇಲೆ ಯಾರ್ಯಾರು ಎಷ್ಟೆಷ್ಟು ಕೊಳಗ ಅಡಿಕೆ ಸುಲಿದರು ಎಂದು ಲೆಕ್ಕ ಬರೆದಿಟ್ಟುಕೊಳ್ಳುವ ಮನೆಯವರು ಸುಮ್ಮನೆ ತೂಕಡಿಸುತ್ತಾ ಕೂರದೆ ತಾವೂ ಒಂದು ಕತ್ತಿ ಹೂಡಿಕೊಂಡು ಸಾಧ್ಯವಾದಷ್ಟು ಅಡಿಕೆಸುಲಿತ ಮಾಡುತ್ತಿದ್ದರು. ಸೀತಾಲಕ್ಷ್ಮಿಯ ತೌರಿನಲ್ಲಿ ಮನೆಯವರೆಲ್ಲರೂ ಅಡಿಕೆಸುಲಿತಕ್ಕೆ ಕೂರುವ ರಿವಾಜು. ಕೈ ಪಳಗಿಸಿಕೊಳ್ಳುತ್ತಿರುವ ಮಕ್ಕಳಿಗೆ, ಪಳಗಿಸಿಕೊಂಡ ಹೆಂಗಸರಿಗೆ ಒಂದಿಷ್ಟು ಸ್ವಂತ ದುಡ್ಡು ಮಾಡಿಕೊಳ್ಳಲು ಇದು ಸಕಾಲ. ಮನೆಯವರೇ ಆದರೂ ಲೆಕ್ಕ ಬರೆಸಿಟ್ಟುಕೊಂಡು ದುಡ್ಡು ವಸೂಲಿ ಮಾಡಿ, ಎಳ್ಳಮವಾಸ್ಯೆ ಜಾತ್ರೆಯಲ್ಲಿ ಹುಡಿ ಹಾರಿಸಲು ಕಾಪಿಟ್ಟುಕೊಂಡು ಸಂಭ್ರಮಿಸುತ್ತಿದ್ದರು. ಅಡಿಕೆಕೊಯ್ಲು ಶುರುವಾದಾಗ ಸೀತಾಲಕ್ಷ್ಮಿಗೆ ಕೈ ತುರಿಸಲು ಶುರುವಾಗಿತ್ತು. ರಕ್ತ ಹೆಪ್ಪುಗಟ್ಟಿಸುವಂಥ ಚಳಿಯಲ್ಲೂ ಅವಳು ಅಡಿಕೆಸುಲಿತ ಮಾಡಲು ಕುಣಿಯುತ್ತಿರುವುದನ್ನು ಕಂಡು ವೆಂಕಮ್ಮ ಹೇಳಿದ್ದರು, 'ನಿನ್ನ ಗಂಡನ್ನ ಕೇಳ್ಕಳೇ ಮಾರಾಯ್ತೀ, ಅವನು ಹೂಂಗುಟ್ಟಿದ್ರೆ ಏನಾರೂ ಕುಣಿ...'

ಗಂಡನನ್ನು ಕೇಳಲು ಸೀತಾಲಕ್ಷ್ಮಿಗೆ ಬಾಯಿ ಬರಲಿಲ್ಲ. ಅಷ್ಟು ಸಲಿಗೆ ಅವನು ಕೊಟ್ಟವನಲ್ಲ. ಅವನಾಗಿ ಬಾಯ್ಬಿಟ್ಟು ಹೇಳಲಿ... ಎಂದು ಕಾದಿದ್ದೇ ಬಂತು. ಹಡೆ ಪುರಾಣ, ಪಟ್ಟಾಂಗ, ಕತೆ, ಒಗಟುಗಳು ಎಗ್ಗಿಲ್ಲದೆ ಚಲಾವಣೆಯಾಗುವಲ್ಲಿ ತನ್ನ ಹೆಂಡತಿಯನ್ನು ಸೇರಗೊಡಲಿಲ್ಲ ಶಿವರಾಮ. ಸೇರೇಗಾರರು ಮುಂಗಡ ಕೊಟ್ಟು ಕರೆದುಕೊಂಡು ಬಂದಿರುತ್ತಿದ್ದ ಆಳುಗಳು ಎಲ್ಲವನ್ನೂ ನಿಭಾಯಿಸುವಷ್ಟು ಗಟ್ಟಿಗರಾಗಿದ್ದರು. ಒಂದಿಷ್ಟು ಸ್ವಂತ ದುಡ್ಡು, ಕೊನೇಪಕ್ಷ ಜಾತ್ರೆಯಲ್ಲಿ ಕಣ್ಣಿಗೆ ರಂಗಾಗಿ ಕಂಡ ಚುಕ್ಕಿ ಬಳೆಗಳನ್ನು ಕೊಳ್ಳುವಷ್ಟಾದರೂ ಸಂಪಾದಿಸಬೇಕೆಂಬ ಸೀತಾಲಕ್ಷ್ಮಿಯ ಸಣ್ಣ ಆಸೆ ಆಸೆಯಾಗಿಯೇ ಉಳಿದುಹೋಯ್ತು. ಸ್ವಸಂಪಾದನೆಗೆ ಸೀತಾಲಕ್ಷ್ಮಿ ಉತ್ಸುಕತೆ ತೋರಿಸಲು ಮತ್ತೊಂದು ಕಾರಣ ಇತ್ತು. ಅಪರೂಪಕ್ಕೆ ಅಮ್ಮ ಬಂದುಗಿಂದರೆ ಕುಪ್ಪಸದ ಖಣದೊಳಗೆ ಇಟ್ಟುಕೊಡಲು ಚಿಲ್ಲರೆ ನೋಟು ಅವಳ ಕನಸು. ದುಡ್ಡು ಅನ್ನುವುದು ಗಂಡಸರ ಯಜಮಾನಿಕೆಯಲ್ಲಿ ಕಣ್ಣಿಗೆ ಬೀಳದ, ಕೈಗೆ ನಿಲುಕದ ಅಪರೂಪದ ವಸ್ತು. 'ಹೆಂಗಸರ ಕೈಲಿ ದುಡ್ಡೆಂತಕ್ಕೆ? ಬೇಕಾದಾಗ ಕೊಡಲ್ವಾ?' ಎಂದು ಗಂಡಸರ ಧೋರಣೆ.

ಗೌರಿಹಬ್ಬದ ಹೊತ್ತಿಗೆ ಬಳೆಗಾರ ಮನೆ ಬಾಗಿಲಿಗೆ ಮಲಾರ ಹೊತ್ತುಕೊಂಡು ಬಂದಾಗ ಬಳೆ ಇಡಿಸಿಕೊಳ್ಳುತ್ತಿದ್ದರು ಹೆಂಗಸರು. ಯಜಮಾನರಾದವರು ಜನಿವಾರದ ಬೀಗದ ಕೈ ತಿರುಗಿಸಿ ಟ್ರೆಜರಿ ಬಾಗಿಲು ತೆಗೆದು ದುಡ್ಡು ಎಣಿಸಿಕೊಡುತ್ತಿದ್ದರು. ಈ ಮನೆಯಲ್ಲಿ ಬಳೆ ಇಡಿಸಿಕೊಳ್ಳುವವರು ಮತ್ಯಾರಿದ್ದಾರೆ? ವೆಂಕಟರಾಮುವಿಗೆ ಮದುವೆಯಾಗಿ ವಾರಗಿತ್ತಿ ಮನೆಗೆ ಬಂದರೆ ಇಬ್ಬರು. ಇಲ್ಲದಿದ್ದರೆ ಒಬ್ಬಳೇ. 'ಹಗಲೂ ರಾತ್ರಿ ಎನ್ನದೆ ಇಷ್ಟೆಲ್ಲಾ ದುಡಿಸಿಕೊಳ್ಳುತ್ತಾರಲ್ಲಾ ಗಂಡಸರು, 'ತಗಾ, ಇಟ್ಕಾ...' ಎಂದು ಕೃತಜ್ಞತೆ ತೋರಿಸುವುದಕ್ಕಾದರೂ ಒಂದಿಷ್ಟು ದುಡ್ಡು ಕೊಟ್ಟರೆ ಬಡಸ್ತಿಕೆ ಬರುತ್ತದೆಯಾ?' ಎನ್ನುವಂಥ ಭಾವನೆಯೊಂದು ಸೀತಾಲಕ್ಷ್ಮಿಯ ಮನಸ್ಸಿನಲ್ಲಿ ಆಗೀಗ ಮಿಂಚಿ ಮರೆಯಾಗುತ್ತಿದ್ದುದಿತ್ತು. ಮಿಂಚಿನಷ್ಟೇ ಕ್ಷಣಿಕವಾದ ಭಾವನೆ.

ಹೆಂಗಸರು ತಮ್ಮ ಕೈಖರ್ಚಿಗೆ ದುಡ್ಡು ಮಾಡಿಕೊಳ್ಳುತ್ತಲೇ ಇರಲಿಲ್ಲ, ಆ ಮಟ್ಟಿಗಿನ ಪ್ರಾಮಾಣಿಕತೆ, ಮುಗ್ಧತೆ ಅವರಲ್ಲಿತ್ತು ಎಂದು ಹೇಳುವಂತೆಯೂ ಇಲ್ಲ. ವರ್ಷಾವಧಿಯ ಉಪಯೋಗಕ್ಕೆ ಮನೆಗೆ ತಂದ ಮೂಟೆಗಟ್ಟಲೆ ದಿನಸಿ ಸಾಮಗ್ರಿಗಳಲ್ಲಿ ಅಷ್ಟಿಷ್ಟನ್ನು ತಮಗೆ ಹತ್ತಿರವಿದ್ದ ಅಂಗಡಿಯಲ್ಲಿ ಅರ್ಧ ಬೆಲೆಗೆ ಮಾರಿಕೊಳ್ಳುವ ಚಾಣಾಕ್ಷೆಯರಿರುತ್ತಿದ್ದರು. ಮನೆ ಮೆಟ್ಟಿಲು ಇಳಿದು ಗೊತ್ತಿಲ್ಲದವರು ಕದ್ದು ಮಾರುವುದು ಹೇಗೆ ಎಂಬ ಪ್ರಶ್ನೆ ಅನುಚಿತ. ಅದಕ್ಕೆ ಬೇಕಾದ ವ್ಯವಸ್ಥೆಯನ್ನು ಅವರು ಕಂಡುಕೊಂಡಿರುತ್ತಿದ್ದರು. ಮನೆಯ ಆಳುಗಳಲ್ಲಿ ಅವರ ನಂಬಿಕೆಗೆ ಅರ್ಹನಾದ ಕೆಲಸದಾಳಿನ ಮುಖಾಂತರ ವ್ಯವಹಾರ. ಅವನು ಗುಟ್ಟುಗುಟ್ಟಾಗಿ ಯಜಮಾಂತಿಯ ಕೆಲಸ ಮಾಡಿಕೊಡುವುದರಲ್ಲಿ ನಿಪುಣ. ಕೆಲವೊಮ್ಮೆ ಅಡಿಕೆ ಮೂಟೆಯಿಂದ ಅಡಿಕೆ ಕೂಡಾ ಹಿಂಬಾಗಿಲಿನಿಂದ ಅಂಗಡಿಗೆ ಹೋಗುತ್ತಿತ್ತು. ಇಂಥಾ ಕಳ್ಳಮಾಲುಗಳ ಗುಟ್ಟು ಗೊತ್ತಿದ್ದ ಅಂಗಡಿಯಾತ ಪಿಟ್ಟೆಂದು ಎಲ್ಲೂ ಉಸಿರೊಡೆಯುತ್ತಿರಲಿಲ್ಲ. ಅಡಿಕೆಕೊಯ್ಲು ಮುಗಿದ ಮೇಲೆ ಅಲ್ಲಲ್ಲಿ ಉದುರಿ ಬಿದ್ದಿರುತ್ತಿದ್ದ ಅಡಿಕೆಕಾಯಿಗಳನ್ನು ಹೆರಕಿ ತಂದು, ಸಿಪ್ಪೆ ಸುಲಿದು, ಬೇಯಿಸಿ, ಈ ಕದರಡಕೆಯ ಮೇಲೆ ಹೆಂಗಸರ ಹಕ್ಕುಸ್ವಾಮ್ಯ. ಎಷ್ಟೋ ಮನೆಗಳಲ್ಲಿ ಕದರಡಕೆಯ ಹೆಸರಿನಲ್ಲಿ ಚಪ್ಪರದಲ್ಲಿ ಒಣಗುತ್ತಿದ್ದ ಮತ್ತಿನ್ನಷ್ಟು ಅಡಿಕೆಗಳೂ ಸಂಗ್ರಹವಾಗುತ್ತಿದ್ದುವು. ಕದರಡಕೆಯ ವಿಷಯದಲ್ಲಿ ತಲೆ ಹಾಕದ ಕೆಲ ಗಂಡಸರು, 'ಮಾಡ್ಕಣ್ಲಿ ತಗಾ. ಅಡಿಕೆಕೊಯ್ಲಲ್ಲಿ ನಿದ್ದೆ ಬಿಟ್ಟು ದುಡಿದಿದಾವೆ' ಎಂದು ಉದಾರತೆ ಮೆರೆಯುತ್ತಿದ್ದರು. ಪೆಠಾರಿಯ ಸೀರೆ ಮಡಿಕೆಯಲ್ಲಿ ದುಡ್ಡಿಟ್ಟುಕೊಂಡು ಸುಖಿಸುವ ಕೆಲವರಿಗಷ್ಟೇ ಈ ಹೇಳಿಕೆ ಸೀಮಿತ. ಇವರ ಬಲಗೈ ಭಂಟನಾಗಿರುತ್ತಿದ್ದ ಕೆಲಸದವನು ನಡುಮಧ್ಯ ಅಷ್ಟಿಷ್ಟು ಕಮಾಯಿಸಿಕೊಳ್ಳುತ್ತಿದ್ದ. ಗಾದೆಯೇ ಉಂಟಲ್ಲ, 'ಜೇನುತುಪ್ಪ ಅಳೆಯುವವನು ಕೈ ನೆಕ್ಕಿಕೊಳ್ಳದೆ ಇರುತ್ತಾನಾ?'

***

ಸೀತಾಲಕ್ಷ್ಮಿಯ ಮದುವೆಯಾಗಿ ಈ ಬೇಸಿಗೆಗೆ ಒಂದು ವರ್ಷ. ಸೀತಾಲಕ್ಷ್ಮಿ ಎರಡು ತಿಂಗಳ ಬಸುರಿ. ಕಿರಿಯವನಿಗೆ ಮದುವೆ ಮಾಡಿಬಿಟ್ಟರೆ ಜವಾಬ್ದಾರಿ ಕಳೆಯುತ್ತದೆ ಎಂದು ವೆಂಕಮ್ಮ ಉರು ಹಾಕುತ್ತಿದ್ದರೆ ವಾಸ್ತುದೇವತೆ ಅಸ್ತು... ಅಸ್ತು... ಅಂದೇಬಿಟ್ಟಿತು. ಸಂಬಂಧದ್ದೇ ಹುಡುಗಿ. ವೆಂಕಮ್ಮನ ತೌರಿನ ಪೈಕಿ. ಹೆಸರು ಕನಕ. ತೀರಾ ಚಂದದ ಹುಡುಗಿ ಅಲ್ಲದಿದ್ದರೂ ತೆಗೆದುಹಾಕುವ ಪೈಕಿ ಅಲ್ಲ. ಮನೆಯಲ್ಲಿ ಅನುಕೂಲಸ್ಥರು. ಸೀತಾಲಕ್ಷ್ಮಿಯ ತೌರುಮನೆಯವರಂತೆ 'ತಲೆಗೆಳೆದರೆ ಕಾಲಿಗಿಲ್ಲ, ಕಾಲಿಗೆಳೆದರೆ ತಲೆಗಿಲ್ಲ' ಅನ್ನುವ ಜನ ಅಲ್ಲ. ಮುಖ್ಯವಾಗಿ ಹೊಂದಬೇಕಾದ್ದು ಜಾತಕ. ಚಂದ ಗಿಂದ ಎರಡನೆಯದು. 'ನೀನು ಈ ಮದುವೆಗೆ ಹೂಂ ಅಂದ್ಬಿಡು. ಆಮೇಲೆ ನೋಡು, ನಿನ್ನ ದೆಸೇನೇ ಬದಲಾಗುತ್ತೆ' ಎಂದು ಪರಮ ವಿಶ್ವಾಸದಿಂದ ಹೇಳುವ ಜ್ಯೋತಿಷಿಗಳಂತೆ ಅದನ್ನು ಪರಮಸತ್ಯವೆಂದು ನಂಬುವ ಜನ ಇದ್ದರು. ಆಗಲೂ ಇದ್ದರು. ಈಗಲೂ ಇದ್ದಾರೆ. ಶಿವರಾಮನಿಗೆ ಇಷ್ಟು ಬೇಗ ತಮ್ಮನಿಗೆ ಮದುವೆ ಮಾಡಬೇಕೆಂಬ ಅತ್ಯುತ್ಸಾಹವೇನಿರಲಿಲ್ಲ. ಬೇಡವೇ ಬೇಡ ಎನ್ನುವ ಹಟವೂ ಇರಲಿಲ್ಲ. ಅಡಿಕೆಕೊಯ್ಲು ಮುಗಿದಿತ್ತು. ಮನೆಯ ಎದುರು ಹಾಕಿದ್ದ ಅಡಿಕೆ ಒಣಗಿಸುವ ಚಪ್ಪರ ಖಾಲಿಯಾಗಿ, ಹಪ್ಪಳ ಸಂಡಿಗೆಗಳ ಕಾರುಬಾರು ಮುಗಿದು, ಮಳೆಗಾಲಕ್ಕೆಂದು ತಂದ ಕಾಳುಬೇಳೆಗಳು ಗಣಗಣ ಒಣಗಿ, ಡಬ್ಬಗಳಲ್ಲಿ ಶೇಖರಣೆಯಾಗಿದ್ದುವು. ಮತ್ತೆ ಮಳೆಗಾಲ ಶುರುವಾಗುವವರೆಗೆ ತಲೆ ಹೋಗುವಂಥ ಕೆಲಸ ಏನಿರಲಿಲ್ಲ. ಮಳೆಗಾಲಕ್ಕೆ ಬೇಕಾದ ಕಟ್ಟಿಗೆ, ಬಚ್ಚಲೊಲೆಗೆ, ಮುಂದೆ ಅಡಿಕೆಕೊಯ್ಲಿಗೆ, ಅಗತ್ಯವಾದ ಕುಂಟೆಗಳನ್ನು ಕಾನಿನಿಂದ ಕಡಿದು ತಂದು ಕಟ್ಟಿಗೆ ಕೊಟ್ಟಿಗೆಯಲ್ಲಿ